**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂ. 746/2018**

ದಿನಾಂಕಃ**.03.06.2026** ರಂದು ಸಾಕ್ಷಿಗೆ ಮದ್ಯಾಹ್ನ **3.20** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

ಡಿ.ಡಬ್ಲ್ಯೂ-**1**

| | | |
|---|---|---|
| ಹೆಸರು | - | ವೆಂಕಟಮ್ಮ |
| ಗಂಡನ ಹೆಸರು | - | ಬಸವಲಿಂಗ |
| ವಯಸ್ಸು | - | **60** |
| ಉದ್ಯೋಗ | - | ಕೂಲಿ ಕೆಲಸ |
| ವಿಳಾಸ | - | ಬೂದಿಗುಪ್ಪೆಗ್ರಾಮ |

**ಮುಖ್ಯವಿಚಾರಣೆ : ಆರೋಪಿ ಪರ ಶ್ರೀ ಎಸ್.ಆರ್.ಟಿ. ವಕೀಲರಿಂದಃ-**

ಪಿರ್ಯಾದಿ ನನಗೆ ಪರಿಚಯ ಇರುವುದಿಲ್ಲ. ಅವರು ಎಲ್ಲಿ ವಾಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರು ಏನು ಕೆಲಸ ಮಾಡುತ್ತಾನೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.**5** ಅಂಚೆ ಸ್ವೀಕೃತಿ ಪತ್ರಕ್ಕೆ ನಾನೇ ಹೆಬ್ಬೆಟ್ಟು ಗುರುತು ಮಾಡಿದ್ದೇನೆ. ದಿನಾಂಕಃ **05.11.2025** ರ ಆದೇಶಪುಟದಲ್ಲಿರುವ ಹೆಬ್ಬೆಟ್ಟು ಗುರುತು ನನ್ನ ಹೆಬ್ಬೆಟ್ಟು ಗುರುತು. ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿ ದಾಖಲಿಸಿಕೊಂಡ ನನ್ನ ಹೇಳಿಕೆಯಲ್ಲಿ ನನ್ನ ಹೆಬ್ಬೆಟ್ಟು ಗುರುತು ಇದೆ. ನನ್ನ ವಕೀಲರು ಹಾಕಿರುವ ವಕಾಲತ್ತಿನಲ್ಲಿ ನನ್ನ ಹೆಬ್ಬೆಟ್ಟು ಗುರುತು ಇದೆ. ನಿ.ಪಿ.**1** ರಲ್ಲಿರುವ ಬರವಣಿಗೆ ಯಾರದ್ದು ಎಂದು ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ನನಗೆ ಓದಲು ಬರೆಯಲು ಬರುವುದಿಲ್ಲ, ಸಹಿ ಮಾಡಲು ಬರುವುದಿಲ್ಲ.

ಸ್ತ್ರೀ ಶಕ್ತಿ ಸಂಘದಲ್ಲಿ ಸಾಲ ತೆಗೆದುಕೊಳ್ಳಲು ನಾನು ನಿ.ಪಿ.**1** ಚೆಕ್ಕನ್ನು ಇಟ್ಟುಕೊಂಡಿದ್ದೆ. ನಾನು ಓದಿರುವುದಿಲ್ಲ. ಪಿರ್ಯಾದಿ ನನ್ನ ಖಾತೆಗೆ ಯಾವುದೇ ಹಣ ಹಾಕಿರುವುದಿಲ್ಲ.

ಮುಂದುವರೆದ ಮುಖ್ಯವಿಚಾರಣೆಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **3.30** ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**